# ✻ ನವಯುಗದ ಸ್ತ್ರೀಕುಲಕ್ಕೆ ಶ್ರೀರಾಮಕೃಷ್ಣರ ಕರೆ ✻

ಪಿ. ಉಷಾ

**ಶ್ರೀರಾಮಕೃಷ್ಣರಿಂದ ಪ್ರೇರಣೆ ಪಡೆದ ಅನೇಕ ಭಕ್ತೆಯರು ಉದಾತ್ತ ಜೀವನವನ್ನು ನಡೆಸಿದ್ದಲ್ಲದೆ ಮಹಿಳೆಯರ ಉನ್ನತಿಗಾಗಿ ಸೇವಾಕಾರ್ಯಗಳಲ್ಲಿ ತೊಡಗಿದರು. ಸಮದೃಷ್ಟಿಯನ್ನು ಹೊಂದಿದ ಸಂತನು ಯಾವುದೇ ಭೇದವನ್ನು ನೋಡುವುದಿಲ್ಲ. ಮಹಿಳೆಯರಿಗೆ ಇಂತಹವರಲ್ಲಿ ಹೇಗೆ ಪೂಜ್ಯ ಭಾವನೆ ಉಂಟಾಗುತ್ತದೆ ಎಂಬುದನ್ನು ಮನೋಜ್ಞವಾಗಿ ತಿಳಿಸಿರುವ ಲೇಖಕಿಯು ವಾರಾಣಸಿಯ ರಾಮಕೃಷ್ಣ ಮಿಷನ್ ಸೇವಾಶ್ರಮದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.**

**ಆ**ಧುನಿಕ ಯುಗದ ಮಹಾಪುರುಷರೆಂದು ಖ್ಯಾತಿ ಪಡೆದಿರುವ ಶ್ರೀರಾಮಕೃಷ್ಣರು ಬಾಲಕ ಗದಾಧರನಾಗಿದ್ದಾಗ ನಡೆದ ಸಣ್ಣದೊಂದು ಘಟನೆ. ಹುಟ್ಟೂರು ಕಾಮಾರಪುಕುರದ ಹೆಂಗಸರಿಗೆಲ್ಲ ಗದಾಧರನೆಂದರೆ ಅಕ್ಕರೆಯೋ ಅಕ್ಕರೆ. ಶ್ರೀಮಂತ ವ್ಯಾಪಾರಿಗಳ ಬೀದಿಯಲ್ಲಿದ್ದ ಸೀತಾನಾಥ ಪಾಯಿನ್‌ಗೆ ಎಂಟು ಮಂದಿ ಹೆಣ್ಣುಮಕ್ಕಳು. ಮನೆಮಂದಿಗೆಲ್ಲರಿಗೂ ಗದಾಧರನೆಂದರೆ ಪಂಚಪ್ರಾಣ. ಆಗಾಗ ಹುಡುಗನನ್ನು ತಮ್ಮಲ್ಲಿಗೆ ಕರೆಸಿಕೊಂಡು ಅವನ ಹಾಡು, ಭಜನೆ, ನೃತ್ಯ, ಅಭಿನಯಗಳನ್ನು ಸವಿದು ಆನಂದಿಸುತ್ತಿದ್ದರು. ಮನೆಯ ಇತರ ನೆರೆಹೊರೆಯವರೂ ಇವುಗಳಲ್ಲಿ ಪಾಲ್ಗೊಂಡಾಗ ಅಲ್ಲೊಂದು ಆನಂದದ ಮೇಳವೇ ಸೃಷ್ಟಿಯಾಗುತ್ತಿತ್ತು. ಇದೇ ಬೀದಿಯಲ್ಲಿ ದುರ್ಗಾದಾಸ ಎಂಬುವವ ಮತ್ತೊಬ್ಬ ವ್ಯಾಪಾರಿ. ಆತ ಅಂದಿನ ಪರದಾ ಪದ್ಧತಿಯನ್ನು ಸಮರ್ಥಿಸುತ್ತಿದ್ದನಾದ್ದರಿಂದ ತನ್ನ ಮನೆಯ ಹೆಣ್ಣು ಮಕ್ಕಳನ್ನು ಹೊರಗೆಲ್ಲಿಗೂ ಕಳಿಸುತ್ತಿರಲಿಲ್ಲ. ಒಮ್ಮೆ ಈ ನಿಯಮವನ್ನು ಸಮರ್ಥಿಸುತ್ತ ಆತ ಮಾತನಾಡುತ್ತಿದ್ದಾಗ ಬಳಿಯಲ್ಲಿ ನಿಂತಿದ್ದ ಹದಿಮೂರು-ಹದಿನಾಲ್ಕು ವರುಷದ ಗದಾಧರನು, "ಪರದಾದಿಂದ ಮಹಿಳೆಯರನ್ನು ರಕ್ಷಿಸಲಾದೀತೆ? ನೈತಿಕ ಶಿಕ್ಷಣ ಹಾಗು ಭಗವದ್ಭಕ್ತಿಗಳಿಂದ ಮಾತ್ರವೇ ಅವರನ್ನು ಕಾಪಾಡಲು ಸಾಧ್ಯ. ನಾನು ಬಯಸಿದರೆ ನಿಮ್ಮ ಮನೆಯೊಳಗೆ ಬಂದು ಅವರ ವಿಷಯವನ್ನೆಲ್ಲ ತಿಳಿಯಬಲ್ಲೆ" ಎಂದನು. ದುರ್ಗಾದಾಸನು ಗರ್ವದಿಂದಲೇ ನುಡಿದ, "ಸಾಧ್ಯವೇ ಇಲ್ಲ!" ಇದಾದ ಕೆಲ ದಿನಗಳ ಬಳಿಕ ಒಂದು ಮಧ್ಯಾಹ್ನ ನೇಕಾರ ಹುಡುಗಿಯೊಬ್ಬಳು ಮನೆಬಾಗಿಲಿಗೆ ಬಂದಳು. ದುರ್ಗಾದಾಸನಿಂದಲೇ ಅನುಮತಿಯನ್ನು ಪಡೆದು ಒಳಗಿನ ಕೊಠಡಿಯನ್ನು ಪ್ರವೇಶಿಸಿ, ಮಹಿಳೆಯರೊಂದಿಗೆ ಬಹಳ ಅನ್ಯೋನ್ಯವಾಗಿ ಬೆರೆತು, ಅವರಿಗೆ ಸಂಬಂಧಿಸಿದ ವಿಷಯಗಳನ್ನು ಕುರಿತು ಮಾತನಾಡುತ್ತಿದ್ದಳು. ತಿಂಡಿ ತೀರ್ಥವೂ ಆಯಿತು. ಹೊತ್ತು ಮೀರಿದಾಗ, ಗದಾಧರನನ್ನು ಹುಡುಕುತ್ತ ಬಂದ ಅವನ ಅಣ್ಣನ ಕೂಗಿಗೆ, "ಇದೋ ಬಂದೆ" ಎನ್ನುತ್ತ ಸೀರೆಯುಟ್ಟಿದ್ದ ಗದಾಧರನು ದುರ್ಗಾದಾಸನ ಮನೆಯೊಳಗಿಂದ ಹೊರಬಂದಾಗ, ಮನೆ ಯಜಮಾನನ ಮುಖದ ಬಣ್ಣವೇ ಬದಲಾಗಿತ್ತು!

ಘಟನೆ ಮೇಲ್ನೋಟಕ್ಕೆ ವಿನೋದಪೂರ್ಣವಾಗಿದ್ದರೂ ಪರಿಶೀಲಿಸಿ ನೋಡಿದಾಗ ಅತ್ಯಂತ ಸ್ವಾರಸ್ಯಕರವಾಗಿದೆ. ನಮಗೆ ಅಂದಿನ ಸಾಮಾಜಿಕ ಪರಿಸ್ಥಿತಿಯ ಪರಿಚಯ ಆಗುವುದರ ಜೊತೆಗೆ ಬಾಲಕ ಗದಾಧರನಿಗೆ ಸ್ತ್ರೀಯರ ಮೇಲಿದ್ದ ಅಭಿಮಾನ ಹಾಗು ಗೌರವಗಳ ಅರಿವೂ ನಮಲ್ಲಿ ಮೂಡುತ್ತದೆ. ಸ್ತ್ರೀಯರು ಅಬಲೆಯರಲ್ಲ, ಸೂಕ್ತ ವಿದ್ಯಾಭ್ಯಾಸದಿಂದ, ತಮ್ಮನ್ನು ತಾವೇ ರಕ್ಷಿಸಿಕೊಳ್ಳುವ ಸಾಮರ್ಥ್ಯವುಳ್ಳವರೆಂಬ ಸಂಪೂರ್ಣ ವಿಶ್ವಾಸವನ್ನು ಶ್ರೀರಾಮಕೃಷ್ಣರು ಹೊಂದಿದ್ದರು. ಜಗತ್ತಿನ ಶ್ರೇಯಸ್ಸಿಗಾಗಿ ಅವತರಿಸಿದ ಶ್ರೀರಾಮಕೃಷ್ಣರು ಯಾವುದೇ ಸಂಪ್ರದಾಯ ಅಥವಾ ಪದ್ಧತಿಯನ್ನು ನಾಶಗೊಳಿಸಲು ಬಂದವರಲ್ಲ, ನಿರ್ಮಿಸಲೋಸುಗ ಬಂದವರವರು. ಹಾಗಾಗಿ ಸಮಾಜದಲ್ಲಿನ ಯಾವುದೇ ಲೋಪದೋಷಗಳನ್ನು ಅವರು ನೇರವಾಗಿ ನಿಂದಿಸಲಿಲ್ಲ, ಆ ಕಾಲದ ಇತರ ಸಮಾಜಸುಧಾರಕರಂತೆ ಬಹಿರಂಗವಾಗಿ ಸಮಾಜದ ಕುಂದುಗಳ ವಿರುದ್ಧ ಪ್ರತಿಭಟಿಸಲೂ ಇಲ್ಲ. ಆದರೆ ಮೇಲಿನ ಸಂದರ್ಭದಂತೆ ಅವಶ್ಯ ಬಂದಾಗ ಅವುಗಳ ಮಾರ್ಪಾಟಾಗಬೇಕೆಂದು ಸ್ಪಷ್ಟವಾಗಿಯೇ ಸೂಚಿಸಿದ್ದರು.

ಸ್ತ್ರೀಗೆ ಲಜ್ಜೆ, ಪವಿತ್ರತೆಗಳೇ ಭೂಷಣ. ಅದನ್ನು ಆಕೆ ಶ್ರೇಷ್ಠ ವಿದ್ಯಾಭ್ಯಾಸದ ಮೂಲಕ ತಾನೇ ಬೆಳೆಸಿಕೊಳ್ಳಬೇಕೆ ಹೊರತು ಹೊರಗಿನ ನಿರ್ಬಂಧಗಳಿಂದ ಆಕೆಯ ಜೀವನವನ್ನು ಸುಧಾರಿಸಲು ಸಾಧ್ಯವಿಲ್ಲವೆಂಬುದು ಶ್ರೀರಾಮಕೃಷ್ಣರ ಖಚಿತ ಅಭಿಪ್ರಾಯ. ಆಧುನಿಕ ನಾಗರಿಕ ಮಹಿಳೆಯು ಸುಶಿಕ್ಷಿತಳೂ, ಸ್ವಾವಲಂಬಿಯೂ ಆಗಿರುವಳು. ಬಹುತೇಕ ಮಹಿಳೆಯರು ಉದ್ಯೋಗಸ್ಥರೂ ಆಗಿದ್ದು ಅನೇಕರು ಮೇಧಾವಿಗಳು, ವೈದ್ಯರು, ಕ್ರೀಡಾಪಟುಗಳು, ಆಡಳಿತಗಾರರು, ರಾಜಕಾರಣಿಗಳು ಹಾಗೂ ಪೊಲೀಸ್ ಅಧಿಕಾರಿಗಳು ಆಗಿರುವರು. ಮಹಿಳಾ ಪರ್ವತಾರೋಹಿಗಳ ಹಾಗೂ ಅಂತರಿಕ್ಷಯಾನಿಗಳ ಬಗ್ಗೆಯೂ ನಮಗೆ ತಿಳಿದಿದೆ. ಇಷ್ಟಾದರೂ ಅವಳ ಜೀವನದ ರೀತಿ ಉತ್ತಮಗೊಂಡಿದೆ ಎಂದು ಹೇಳುವ ಹಾಗಿಲ್ಲ. ಇನ್ನು ಗ್ರಾಮೀಣ ಮಹಿಳೆಯರ ಸ್ಥಿತಿಯಂತೂ ಶೋಚನೀಯವೇ ಸರಿ. ಅಶಿಕ್ಷಿತರೂ, ಪುರುಷಾವಲಂಬಿಗಳೂ ಆಗಿರುವ ಅವರು, ತಮ್ಮಲ್ಲಿ ಅಡಗಿರುವ ಶಕ್ತಿಯನ್ನು ಸಂಪೂರ್ಣವಾಗಿ ಮರೆತು, ತಾವು ಅಬಲೆಯರೆಂದೇ ತಿಳಿದು, ದುಃಖಮಯ ಜೀವನವನ್ನು ನಡೆಸುತ್ತಾರೆ. ಹಳ್ಳಿಗಳಲ್ಲಿ ದಿಟ್ಟತನ ಹಾಗೂ ತಿಳಿವಳಿಕೆಯಿಂದ ತಮ್ಮದೇ ಆದ ಜೀವನವನ್ನು

ರೂಪಿಸಿಕೊಳ್ಳುವ ಸ್ತ್ರೀಯರನ್ನು ಕಾಣುವುದು ಅಪರೂಪ. ಪಟ್ಟಣದ ಪ್ರದೇಶಗಳಲ್ಲೂ ಸ್ವತಃ ತಂದೆ ತಾಯಿಯರೇ ತಮ್ಮ ಹೆಣ್ಣು ಮಕ್ಕಳನ್ನು ಹೊರೆಯೆಂದು ಭಾವಿಸುವುದು ಸಾಮಾನ್ಯ ಸಂಗತಿಯಾಗಿದೆ.

ಭೂತ, ವರ್ತಮಾನ, ಭವಿಷ್ಯತ್ತಿನಲ್ಲೂ ಕೌಟುಂಬಿಕ, ಸಾಮಾಜಿಕ ಹಾಗೂ ರಾಷ್ಟ್ರೀಯ ಜೀವನದ ಬುನಾದಿಯೇ ಸ್ತ್ರೀ. ಸಮಾಜದ ಯಾವುದೇ ವರ್ಗಕ್ಕೆ ಸೇರಿದ್ದರೂ ಆಕೆಯಲ್ಲಿ ಎದ್ದುಕಾಣಬೇಕಾದ ಗುಣಗಳೆಂದರೆ ಪವಿತ್ರತೆ, ಪ್ರೀತಿ, ವಾತ್ಸಲ್ಯ, ಕರುಣೆ, ತ್ಯಾಗ, ಶ್ರದ್ಧೆ, ಭಕ್ತಿ, ಸಹನೆ ಹಾಗೂ ಸೇವಾ ಮನೋಭಾವ. ಇವುಗಳನ್ನು ಆಕೆ ಕಳೆದುಕೊಂಡದ್ದೇ ಆದರೆ ಸಮಾಜದ ಅಧಃಪತನ ನಿಶ್ಚಿತ. ಆದ್ದರಿಂದಲೆ ಆಕೆ ವಿದ್ಯಾವಂತಳೂ ಸುಸಂಸ್ಕೃತಳೂ ಆಗಿರಬೇಕು. ಈ ವಿಚಾರವನ್ನು ಶ್ರೀರಾಮಕೃಷ್ಣರು ಸ್ವತಃ ತಾವು ತಿಳಿದಿದ್ದರಲ್ಲದೆ ತಮ್ಮ ಭಕ್ತರಿಗೆ, ಅದರಲ್ಲೂ ಭಕ್ತೆಯರಿಗೆ ಹಲವು ವಿಧಗಳಲ್ಲಿ ತೋರಿಸಿಕೊಟ್ಟರು.

ತಮ್ಮ ಶಿಷ್ಯೆ ಗೌರಿ ಮಾ, ಒಮ್ಮೆ ದೇವರ ಪೂಜೆಗೆಂದು ಹೂವುಗಳನ್ನು ಬಿಡಿಸುತ್ತಿದ್ದಾಗ, ಒಂದು ಕೈಯಿಂದ ಕೊಡದಲ್ಲಿದ್ದ ನೀರು ಚಿಮುಕಿಸುತ್ತ ಮತ್ತೊಂದು ಕೈಯಲ್ಲಿ ಬಕುಳ ವೃಕ್ಷದ ರೆಂಬೆಯನ್ನು ಹಿಡಿದ ಶ್ರೀರಾಮಕೃಷ್ಣರು, "ನಾನು ನೀರು ಹೊಯ್ಯುವೆ, ನೀನು ಮಣ್ಣನ್ನು ಹದಮಾಡು" ಎಂದರು. ಈ ನುಡಿಗಳ ಭಾವಾರ್ಥವನ್ನು ತಿಳಿಯದ ಆಕೆಗೆ ಮತ್ತೂ ವಿಸ್ತಾರವಾಗಿ ವಿವರಿಸಿದರು: "ಈ ದೇಶದ ಮಹಿಳೆಯರ ಸ್ಥಿತಿ ನೋಡಿದಾಗ ನನ್ನ ಮನ ಮಿಡಿಯುತ್ತದೆ. ಅವರಿಗಾಗಿ ನೀನು ಕೆಲಸ ಮಾಡಬೇಕು." ಪ್ರಾಪಂಚಿಕ ಜನರೊಡನೆ ಬೆರೆತು ಕೆಲಸ ಮಾಡಲು ತನಗಾಗದೆಂದು ಹೇಳಿದರೂ ಶ್ರೀರಾಮಕೃಷ್ಣರು ಆಕೆಯನ್ನು ಬಿಡಲೊಲ್ಲರು. "ನೀನು ಸಾಕಷ್ಟು ಆಧ್ಯಾತ್ಮಿಕ ಸಾಧನೆಯನ್ನು ಮಾಡಿರುವೆ. ಹಾಗೆ ಗಳಿಸಿದ ಆಧ್ಯಾತ್ಮಿಕ ಶಕ್ತಿಯಿಂದ ಅವರಿಗಾಗಿ ನಗರದಲ್ಲಿ ದುಡಿಯಬೇಕು" ಎಂಬ ಅವರ ಆದೇಶದ ಮೇರೆಗೆ ಆಕೆಯು ಕೊಲ್ಕತಾದಲ್ಲಿ ಶ್ರೀ ಶಾರದೇಶ್ವರಿ ಆಶ್ರಮವನ್ನು ಸ್ಥಾಪಿಸಿ ಮಹಿಳೆಯರ ಉದ್ಧಾರಕ್ಕಾಗಿ ಶ್ರಮಿಸಿದರು.

ಶ್ರೀರಾಮಕೃಷ್ಣರು ಭೈರವಿ ಬ್ರಾಹ್ಮಣಿಯನ್ನು ತಮ್ಮ ಗುರುವಾಗಿ ಸ್ವೀಕರಿಸಿದುದು, ರಾಣಿ ರಾಸಮಣಿ ಎಂಬ ಜಮೀನುದಾರ ಮಹಿಳೆಯು ಕಟ್ಟಿಸಿದ ಕಾಳೀ ದೇವಾಲಯದಲ್ಲಿ ಉಪಾಸಕರಾಗಿ ಅತ್ಯುನ್ನತ ಆಧ್ಯಾತ್ಮಿಕ ಶಿಖರಕ್ಕೇರಿದುದು, ತಮ್ಮ ಸಹಧರ್ಮಿಣಿ ಶ್ರೀಶಾರದಾದೇವಿಯವರನ್ನು ಶಕ್ತಿಪೀಠದಲ್ಲಿ ಕುಳ್ಳಿರಿಸಿ ಷೋಡಶಿ ಪೂಜೆಯನ್ನು ಮಾಡಿ ತಮ್ಮ ಸಮಸ್ತ ಸಾಧನಾಫಲವನ್ನೂ ಆಕೆಯ ಪದಕಮಲಗಳಿಗೆ ಸಮರ್ಪಿಸಿದುದು—ಇವೆಲ್ಲ ಸ್ತ್ರೀಕುಲಕ್ಕೆ ಅತಿ ಹೆಮ್ಮೆಯ ವಿಷಯ. ಇಷ್ಟಲ್ಲದೆ ಗುರುಭಾವದಲ್ಲಿ ಅವರು ಅನೇಕ ಸ್ತ್ರೀಯರಿಗೆ ಭಗವಂತನ ಸಾಕ್ಷಾತ್ಕಾರದ ಪಥವನ್ನು ತೋರಿದರು. ಲಕ್ಷ್ಮೀದೇವಿ, ರಾಣಿ ರಾಸಮಣಿ, ಯೋಗಿನ್ ಮಾ, ಗೋಲಾಪ್ ಮಾ, ಗೌರಿ ಮಾ, ಅಘೋರಮಣಿ ದೇವಿ, ನಿಸ್ತಾರಿಣಿ ದೇವಿ (ರಸದ್ದಾರರಾದ ಬಲರಾಮ ಬಸುವಿನ ಪತ್ನಿ), ನಟಿ ವಿನೋದಿನಿ, ದಾರಿ ತಪ್ಪಿದ ರಮಣಿ ಹಾಗೂ ಇತರ ಅನೇಕ ಮಂದಿ ಭಕ್ತೆಯರಿಗೆ ಅವರು ನೀಡಿದ ಶಿಕ್ಷಣ ಹಾಗೂ ಸಂದೇಶ, ಪ್ರೀತಿ ಹಾಗೂ ಭರವಸೆಗಳು ಇಡೀ ಸ್ತ್ರೀಕುಲಕ್ಕೆ ಅನ್ವಯಿಸುತ್ತವೆ.

ಶ್ರೀರಾಮಕೃಷ್ಣರು ಸ್ತ್ರೀಯರನ್ನೆಂದೂ ಪುರುಷರಿಗಿಂತ ಕೀಳಾಗಿ ಕಂಡವರಲ್ಲ. ಬದಲಾಗಿ ಸಾಕ್ಷಾತ್ ಜಗನ್ಮಾತೆಯೇ ಅವರಲ್ಲಿ ವಿರಾಜಮಾನಳಾಗಿರುವುದು ಅವರ ಅನುಭವಕ್ಕೆ ಬರುತ್ತಿದ್ದು, ಅವರನ್ನು ಅತ್ಯಂತ ಪೂಜ್ಯಭಾವದಿಂದಲೂ, ಅಪಾರ ಪ್ರೀತಿಯಿಂದಲೂ ಕಾಣುತ್ತಿದ್ದರು. "ಈಗೀಗ, ಅನೇಕರು ರಾಮಕೃಷ್ಣರು ಮಹಿಳೆಯರನ್ನು ತಮ್ಮ ಹತ್ತಿರ ಸುಳಿಯಲು ಅಥವಾ ಪಾದ ಸ್ಪರ್ಶವನ್ನು ಮಾಡಲು ಬಿಡುತ್ತಿರಲಿಲ್ಲ ಎಂದಾಗ ನಗು ಬರುತ್ತದೆ. ಅವರ ಪರಮ ಕೃಪೆಯನ್ನು ಪಡೆದ ನಾವಿನ್ನೂ ಬದುಕಿದ್ದೇವೆ. ಪುರುಷ-ಸ್ತ್ರೀಯರಲ್ಲಿ ಅವರು ಯಾವ ತಾರತಮ್ಯವನ್ನೂ ಮಾಡುತ್ತಿರಲಿಲ್ಲ" ಎಂದು ಶ್ರೀರಾಮಕೃಷ್ಣರ ಪರಮಭಕ್ತೆ ಗೋಲಾಪ್ ಮಾ ಹೇಳಿದ್ದುಂಟು.

ಶ್ರೀರಾಮಕೃಷ್ಣರು ತಮ್ಮ ಭಕ್ತೆಯರಿಗೆ ತಮ್ಮ ನಡೆನುಡಿಗಳಿಂದಲೇ ಬೋಧಿಸುತ್ತಿದ್ದರು. ಹೆಚ್ಚಿನ ಸಂದರ್ಭಗಳಲ್ಲಿ ಅವರ ಮಾತುಗಳು ಹೂವಿನಂತೆ ಕೋಮಲವಾಗಿರುತ್ತಿದ್ದವು. ಅವಶ್ಯವೆನಿಸಿದಾಗ ವಜ್ರದಂತೆ ಕಠೋರವಾಗಿಯೂ ಇರಲು ಹಿಂಜರಿಯದೆ ಭಕ್ತೆಯರ ದೋಷಗಳನ್ನು ತಿದ್ದುತ್ತಿದ್ದರು. ಅವರ ಸನಿಹವನ್ನರಸುತ್ತ, ಆಶೀರ್ವಾದ ಬಯಸುತ್ತ ಬಂದ ಭಕ್ತೆಯರಿಗೆ ವ್ಯವಹಾರ ಜ್ಞಾನವನ್ನು ಬೆಳೆಸಿಕೊಳ್ಳಲು ಪ್ರೇರೇಪಿಸುತ್ತಿದ್ದರು. "ಹಾಳು ಹರಟೆಯಲ್ಲಿ ವ್ಯರ್ಥ ಕಾಲಹರಣ ಸಲ್ಲದು, ಪ್ರಾಪಂಚಿಕ ಕಾರ್ಯ ಕಲಾಪಗಳನ್ನು ದೈವೀಭಾವದಿಂದ ನಿರ್ವಹಿಸಬೇಕು. ಪರಿವಾರದವರೊಂದಿಗೆ ಪ್ರೇಮದಿಂದ ವ್ಯವಹರಿಸುವಾಗಲೂ ಅವರೆಲ್ಲ ನಿಜವಾಗಿಯೂ ತನ್ನವರಲ್ಲ, ಭಗವಂತನಿಗೆ ಸೇರಿದವರೆಂದು ತಿಳಿದು ಸೇವೆಗೈಯಬೇಕು. ಜೀವನ ನಶ್ವರ; ಭಗವಂತನೊಬ್ಬನೆ ನಿತ್ಯ ಸತ್ಯ ಎಂದು ಪ್ರಪಂಚದಲ್ಲಿ ಅನಾಸಕ್ತಿಯನ್ನು ಬೆಳೆಸಿಕೊಳ್ಳಬೇಕು" ಎಂಬುದೇ ಅವರ ಶಿಕ್ಷಣದ ತಾತ್ಪರ್ಯವಾಗಿತ್ತು. ಪುರುಷ ಭಕ್ತರಿಗೆ ನೀಡಿದ ಕಾಮ-ಕಾಂಚನ ತ್ಯಾಗದ ಮಹದುಪದೇಶವನ್ನೇ ಶ್ರೀರಾಮಕೃಷ್ಣರು ಮಹಿಳೆಯರಿಗೂ ನೀಡಿದರು.

ಶ್ರೀರಾಮಕೃಷ್ಣರು ತಮ್ಮನ್ನು ಜಗನ್ಮಾತೆಯ ಶಿಶುವೆಂದೇ ಭಾವಿಸಿಕೊಂಡು ಐದು ವರ್ಷದ ಬಾಲಕನಂತೆ ಇರುತ್ತಿದ್ದರು. ಲಜ್ಜೆ, ದೇಹಬೋಧೆಗಳೇ ಇಲ್ಲದ್ದರಿಂದ ಮಹಿಳಾ ಭಕ್ತೆಯರು ನಿಃಸಂಕೋಚವಾಗಿ ಅವರೊಡನೆ ಮಾತನಾಡಬಹುದಾಗಿತ್ತು.

ಶ್ರೀರಾಮಕೃಷ್ಣರ ಪದತಲದಲ್ಲಿ ಕುಳಿತಾಗ ಅವರ ಆಧ್ಯಾತ್ಮಿಕ ನಿಲುವಿನಲ್ಲಿ ಅದೆಷ್ಟು ಶ್ರದ್ಧೆ ಬೇರೂರಿರುತ್ತಿತ್ತೆಂದರೆ ಅವರು ಹೇಳಿದ ಯಾವುದೇ ಕಾರ್ಯವನ್ನು ನಿರ್ಭೀತಿಯಿಂದ ಸಾಧಿಸುತ್ತಿದ್ದರು. ಎಂದೂ ಪಲ್ಲಕ್ಕಿಯಿಲ್ಲದೆ ಮನೆಯಿಂದ ಹೊರಗೆ ಹೋಗದ ಕುಲೀನಸ್ತ್ರೀಯರು ಶ್ರೀರಾಮಕೃಷ್ಣರ ಆಣತಿಯಂತೆ ಕಲ್ಕತ್ತೆಯ ಮುಖ್ಯರಸ್ತೆಗಳ ಮೂಲಕ ಗಂಗಾತೀರಕ್ಕೆ ನಡೆದು ಬಂದು, ಶ್ರೀರಾಮಕೃಷ್ಣರೊಂದಿಗೆ ದೋಣಿಯಲ್ಲಿ ದಕ್ಷಿಣೇಶ್ವರದ ಕಾಳೀಮಂದಿರವನ್ನು ಸೇರುತ್ತಿದ್ದರು. ಶ್ರೀರಾಮಕೃಷ್ಣರು ಹೇಳಿದಾಗ ಮಾರುಕಟ್ಟೆಗೆ ಹೋಗಿ ಅಡುಗೆ ಸಾಮಗ್ರಿಗಳನ್ನು ತಂದುಕೊಟ್ಟು ಸಂಜೆಯ ವೇಳೆಗೆ ಕಾಲ್ನಡಿಗೆಯಲ್ಲೆ ತಮ್ಮ ತಮ್ಮ ಮನೆಗಳಿಗೆ ಹಿಂದಿರುಗುತ್ತಿದ್ದರು.

ಒಂದು ಸಲ ಬಾಗ್ ಬಜಾರ್‌ನ ಕುಲಸ್ತ್ರೀಯೊಬ್ಬಳು ತನ್ನ ಸ್ನೇಹಿತೆಯೊಂದಿಗೆ ಶ್ರೀರಾಮಕೃಷ್ಣರ ದರ್ಶನಾರ್ಥಿಯಾಗಿ ದಕ್ಷಿಣೇಶ್ವರಕ್ಕೆ ಬಂದಾಗ ಮಧ್ಯಾಹ್ನವಾಗಿತ್ತು. ಶ್ರೀರಾಮಕೃಷ್ಣರು ವಿಶ್ರಮಿಸಿಕೊಳ್ಳುತ್ತಿದ್ದುದನ್ನು ಕಂಡ ಅವರಿಬ್ಬರೂ ಹತ್ತಿರದ ನಹಬತ್ತಿಗೆ ಹೋಗಿ ಅವರಿಗಾಗಿ ಕಾದರು. ವಿಶ್ರಾಂತಿಯ ಬಳಿಕ ಶ್ರೀರಾಮಕೃಷ್ಣರು ಎದ್ದು ಭಕ್ತೆಯರನ್ನು ಕರೆದರು. ಭಕ್ತೆಯರು ಬಂದು ಚಾಪೆಯ ಮೇಲೆ ಕುಳಿತಾಗ, ಮಂಚದ ಮೇಲೆ ಕುಳಿತಿದ್ದ ಶ್ರೀರಾಮಕೃಷ್ಣರು, ಕೆಳಗಿಳಿದು ತಾವೂ ಚಾಪೆಯಲ್ಲಿ ಕುಳಿತರು. ಮೊದಲ ಬಾರಿಗೆ ರಾಮಕೃಷ್ಣರನ್ನು ಕಾಣಲು ಬಂದಿದ್ದ ಒಬ್ಬಾಕೆ ಸ್ವಲ್ಪ ಅತ್ತ ಸರಿದಾಗ ಅವರೆಂದರು, "ಅದೇಕೆ ನಾಚಿಕೊಳ್ಳುವೆ? ನಾಚಿಕೆ, ತಿರಸ್ಕಾರ, ಭಯ—ಇವುಗಳಿರುವ ತನಕ ಏನನ್ನೂ ಸಾಧಿಸಲಾಗದು. ನಾನು, ನೀನು ಒಂದೇ ತತ್ತ್ವವೇ ಆಗಿದ್ದೇವೆ. ಆದರೆ, ಇದರಿಂದಾಗಿ (ತಮ್ಮ ಗಡ್ಡವನ್ನು ತೋರುತ್ತ) ನಿನಗೆ ನಾಚಿಕೆಯಾಯಿತಲ್ಲವೆ?" ಭಗವಂತನ ಬಗ್ಗೆ ತಮ್ಮ ಮಾತುಗಳನ್ನು ಮುಂದುವರೆಸುತ್ತ ಇಬ್ಬರಿಗೂ ಶ್ರೀರಾಮಕೃಷ್ಣರು ಆಧ್ಯಾತ್ಮಿಕ ಬೋಧನೆಯನ್ನು ನೀಡಿದರು. ಭಕ್ತೆಯರಿಬ್ಬರೂ ಹೊರಡುವಾಗ "ವಾರಕ್ಕೊಮ್ಮೆ ಬಂದು ಹೋಗಿ. ಪ್ರಾರಂಭದಲ್ಲಿ ಆಗಾಗ ಬರುತ್ತಿರಬೇಕು" ಎಂದರು. ಬಂದ ಭಕ್ತೆಯರು ಸುಸಂಸ್ಕೃತ ಕುಟುಂಬದವರಾದರೂ ಧನಿಕರಲ್ಲವಾದ್ದರಿಂದ, "ನಾಲ್ಕೈದು ಮಂದಿ ಒಟ್ಟು ಸೇರಿ ದೋಣಿಯಲ್ಲಿ ಬನ್ನಿ. ಹಿಂದಿರುಗುವಾಗ ವರಾಹನಗರದವರೆಗೆ ನಡೆದು ಮತ್ತೆ ಗಾಡಿಯಲ್ಲಿ ಹೋಗಿ ಬಾಡಿಗೆಯನ್ನು ಹಂಚಿಕೊಳ್ಳಬಹುದು" ಎಂಬ ಸಲಹೆಯನ್ನೂ ನೀಡಿದರು. ಹೀಗೆ ಶ್ರೀರಾಮಕೃಷ್ಣರು ವ್ಯವಹಾರಜ್ಞಾನವನ್ನೂ, ಆಧ್ಯಾತ್ಮಿಕ ಮಾರ್ಗದರ್ಶನವನ್ನೂ ಒಟ್ಟೊಟ್ಟಿಗೇ ನೀಡುತ್ತಿದ್ದರು.

ಸ್ತ್ರೀಯರು ನಿಷ್ಠಾವಂತರೂ, ಬುದ್ಧಿವಂತರೂ, ಧೈರ್ಯವಂತರೂ ಆಗಿರಬೇಕು. ಗಿರೀಶ ಘೋಷನ "ಚೈತನ್ಯಲೀಲಾ" ಎಂಬ ನಾಟಕದಲ್ಲಿ ಶ್ರೀಚೈತನ್ಯರ ಪಾತ್ರ ವಹಿಸಿದ್ದ ಜನಪ್ರಿಯ ಹಾಗೂ ಪ್ರತಿಭಾನ್ವಿತ ಅಭಿನೇತ್ರಿ ಬಿನೋದಿನಿ ಶ್ರೀರಾಮಕೃಷ್ಣರ ಕೃಪಾಪಾತ್ರಳು. ಶ್ರೀರಾಮಕೃಷ್ಣರು ಗಂಟಲಿನ ಕ್ಯಾನ್ಸರ್‌ನಿಂದ ಪೀಡಿತರಾಗಿದ್ದ ಸುದ್ದಿಯನ್ನು ತಿಳಿದ ಅವಳಿಗೆ ಅವರನ್ನು ನೋಡಿಬರಬೇಕೆಂಬ ತೀವ್ರ ಹಂಬಲ. ಆದರೆ ಶಿಷ್ಯವೃಂದದವರು, ಶ್ರೀರಾಮಕೃಷ್ಣರು ಹೆಚ್ಚು ಮಾತನಾಡಿದರೆ ಕಾಯಿಲೆ ಮತ್ತೂ ಉಲ್ಬಣಗೊಳ್ಳುವುದೆಂದು ಎಣಿಸಿ ಯಾರನ್ನೂ ಅವರ ಸನ್ನಿಧಿಗೆ ಹೋಗಲು ಬಿಡುತ್ತಿರಲಿಲ್ಲ. "ಅದರಲ್ಲೂ 'ಅಪವಿತ್ರ' ಜೀವನವನ್ನು ನಡೆಸಿದ್ದ ನಟಿಗೆ ಹೇಗೆ ತಾನೆ ಅವರ ದರ್ಶನ ಪಡೆಯಲು ಅನುಮತಿ ನೀಡಿಯಾರು? ಬಿನೋದಿನಿ ಶ್ರೀರಾಮಕೃಷ್ಣರ ಭಕ್ತ ಕಾಳೀಪದನ ಸಹಾಯವನ್ನು ಯಾಚಿಸಿದಳು. ಒಂದು ಸಂಜೆ, ಯುರೋಪಿಯನ್ ಪುರುಷನ ವೇಷವನ್ನು ಧರಿಸಿ ಕಾಳೀಪದನೊಂದಿಗೆ ಶ್ರೀರಾಮಕೃಷ್ಣರ ಕೋಣೆಗೆ ಪ್ರವೇಶ ಪಡೆದಳು. ಬಂದ ವಿದೇಶಿ ಯಾರೆಂದು ತಿಳಿದಾಗ, ಆಕೆಯ ಶ್ರದ್ಧಾಭಕ್ತಿ, ಬುದ್ಧಿವಂತಿಕೆ ಮತ್ತು ಧೈರ್ಯವನ್ನು ಮೆಚ್ಚುತ್ತ ಆಕೆಯನ್ನು ಶ್ರೀರಾಮಕೃಷ್ಣರು ಹೃದಯಾಂತರಾಳದಿಂದ ಆಶೀರ್ವದಿಸಿದರು.

ಈ ಆಧುನಿಕ ಯುಗದಲ್ಲಿ ನಮ್ಮ ಇತಿಮಿತಿಯಿಲ್ಲದ ಬೇಕುಗಳಿಗೆ ಕಡಿವಾಣ ಹಾಕದಿದ್ದರೆ, ನಮ್ಮ ಅವನತಿಗೆ ಹೆಚ್ಚು ಸಮಯ ಬೇಕಾಗುವುದಿಲ್ಲ. ಭೋಗಲಾಲಸೆಯು ನಮ್ಮ ಬದುಕನ್ನು ಅಶಾಂತಿಮಯವಾಗಿಸಿಬಿಡುವುದು. ಇದರಿಂದ ತಪ್ಪಿಸಿಕೊಳ್ಳಬೇಕಾದರೆ ಬಹಳ ಎಚ್ಚರಿಕೆಯಿಂದಲೇ ಇರಬೇಕಾಗುತ್ತದೆ. ತಮ್ಮ ಪ್ರಿಯ ಭಕ್ತೆ ಅಘೋರಮಣಿ ದೇವಿ ಅಥವಾ 'ಗೋಪಾಲೇರ್ ಮಾ'ರ ಮೂಲಕ ಶ್ರೀರಾಮಕೃಷ್ಣರು ವೈರಾಗ್ಯ, ಅಪರಿಗ್ರಹಗಳ ಪ್ರಾಮುಖ್ಯತೆಯನ್ನೂ, ಭಗವತ್ಸಾಕ್ಷಾತ್ಕಾರವೇ ಜೀವನದ ಮುಖ್ಯ ಉದ್ದೇಶವೆಂಬುದನ್ನೂ ಆಧುನಿಕ ಸ್ತ್ರೀಯರಿಗೆ ತೋರಿಸಿದ್ದಾರೆ. ಶ್ರೀರಾಮಕೃಷ್ಣರೊಡನೆ ಗೋಪಾಲೇರ್ ಮಾ ಹಾಗೂ ಇತರ ಭಕ್ತರು ಬಲರಾಮ ಬಸುವಿನ ಮನೆಗೆ ಭೇಟಿಯಿತ್ತ ಒಂದು ಸಂದರ್ಭ. ಅಲ್ಲಿಂದ ಹೊರಡುವಾಗ ಬಲರಾಮನ ಮನೆಯವರು ತನಗೆ ನೀಡಿದ ಕೆಲವು ಅಗತ್ಯ ವಸ್ತುಗಳನ್ನೂ, ವಸ್ತ್ರಗಳನ್ನೂ ಗೋಪಾಲೇರ್ ಮಾ ಗಂಟು ಕಟ್ಟಿಕೊಂಡಳು. ದೋಣಿಯಲ್ಲಿ ಈ ಗಂಟು ಶ್ರೀರಾಮಕೃಷ್ಣರ ಗಮನಕ್ಕೆ ಬಾರದಿರಲಿಲ್ಲ. ಅವರು ಅದರ ಬಗ್ಗೆ ವಿಚಾರಿಸಲು ಇತರ ಭಕ್ತರು ಎಲ್ಲವನ್ನೂ ತಿಳಿಸಿದರು. ಶ್ರೀರಾಮಕೃಷ್ಣರು ಗಂಭೀರರಾಗಿ ತ್ಯಾಗ ಹಾಗು ಅಪರಿಗ್ರಹದ ಮಹತ್ವದ ಬಗ್ಗೆ ಮಾತನಾಡಲಾರಂಭಿಸಿದರು. "ತ್ಯಾಗಿಯು ಮಾತ್ರವೇ ಭಗವಂತನನ್ನು ಪಡೆಯಬಲ್ಲ. ಯಾವ ಭಕ್ತನು ಇತರರ ಆತಿಥ್ಯದಿಂದ ಮಾತ್ರವೇ ತೃಪ್ತನಾಗಿ ಬರಿಗೈಯಲ್ಲಿ ಹಿಂದಿರುಗುವನೋ, ಅವನು ಭಗವಂತನಿಗೆ ಬಹಳ ಹತ್ತಿರನಾದವನು." ನೇರವಾಗಿ ಗೋಪಾಲೇರ್ ಮಾಳನ್ನು ಖಂಡಿಸದಿದ್ದರೂ, ಆಕೆಯ ಗಂಟನ್ನೆ ಏಕದೃಷ್ಟಿಯಿಂದ ದಿಟ್ಟಿಸಿ ನೋಡುತ್ತಿದ್ದ ಶ್ರೀರಾಮಕೃಷ್ಣರನ್ನು ಕಂಡಾಗ ಬುದ್ಧಿವಂತೆಯಾದ ಆಕೆಗೆ ಅವರ ಇಂಗಿತವನ್ನು

ಅರ್ಥಮಾಡಿಕೊಳ್ಳುವಲ್ಲಿ ಏನೂ ಕಷ್ಟವಾಗಲಿಲ್ಲ. ಕೂಡಲೇ ಆ ಗಂಟನ್ನು ತೆಗೆದು ನದಿಗೆ ಬಿಸಾಡಲು ಸಿದ್ಧಳಾದಳು. ತ್ಯಾಗ-ವೈರಾಗ್ಯ, ಅಪರಿಗ್ರಹ, ತೃಪ್ತಿಗಳ ಈ ಮಹತ್ತರ ಪಾಠವನ್ನು ನಾವೂ ಕಲಿಯಬೇಕಲ್ಲವೆ?

ಶ್ರೀರಾಮಕೃಷ್ಣರು ಶ್ರೀಶಾರದಾದೇವಿಯವರ ರೂಪದಲ್ಲಿ ನಾರೀಕುಲಕ್ಕೆ ಅತ್ಯುತ್ಕೃಷ್ಟ ಕೊಡುಗೆಯನ್ನೇ ಕೊಟ್ಟರು; ತಮ್ಮ ಸಹಧರ್ಮಿಣಿಯಾದ ಆಕೆಯನ್ನೇ ಆದರ್ಶವಾಗಿ ನವಯುಗದ ಸ್ತ್ರೀಯರ ಮುಂದಿಟ್ಟರು. ಶ್ರೀಶಾರದಾದೇವಿಯವರಿಗೆ ಅವರು ನೀಡಿದ ಮಹೋನ್ನತ ಶಿಕ್ಷಣ ಅದೆಷ್ಟು ಅದ್ಭುತ! ಕಾಲಕ್ಕೆ ತಕ್ಕಂತೆ, ಸ್ಥಳಕ್ಕೆ ತಕ್ಕಂತೆ, ಜನರಿಗೆ ತಕ್ಕಂತೆ ಹೊಂದಿಕೊಳ್ಳುವುದು, ಅತಿ ಸರಳ ಹಾಗು ಸಾಮಾನ್ಯವಾದ ದೈನಂದಿನ ಗೃಹಕೃತ್ಯಗಳನ್ನು ಅಚ್ಚುಕಟ್ಟಾಗಿ ಮಾಡುವುದು, ಕಿರಿಯರನ್ನು ವಾತ್ಸಲ್ಯದಿಂದ ಕಾಣುವುದು, ಹಿರಿಯರ ಸೇವೆಯನ್ನು ಶ್ರದ್ಧಾ ಪೂರ್ವಕವಾಗಿ ಮಾಡುವುದು, ಕುಟುಂಬದವರೊಡನೆ ಹೊಂದಾಣಿಕೆಯಿಂದ ವರ್ತಿಸುವುದು, ಇತರರೊಂದಿಗೆ ಸೌಹಾರ್ದತೆಯಿಂದಿರುವುದು, ಪ್ರಯಾಣ ಮಾಡುವಾಗ ತಮ್ಮೊಂದಿಗಿರುವ ವಸ್ತುಗಳ ಬಗ್ಗೆ ಎಚ್ಚರಿಕೆ ವಹಿಸುವುದು—ಇವೆಲ್ಲ ಪ್ರತಿಯೊಬ್ಬ ಸ್ತ್ರೀಯಲ್ಲೂ ಇರಬೇಕಾದ ಗುಣಗಳು. ಭಜನೆ, ಧ್ಯಾನ, ಕುಂಡಲಿನೀ ಶಕ್ತಿ, ಸಮಾಧಿ ಮುಂತಾದ ಭಗವತ್ಸಾಕ್ಷಾತ್ಕಾರಕ್ಕೆ ಸಂಬಂಧಿಸಿದ ಯಾವುದೇ ವಿಚಾರವಾಗಲಿ ಅವರ ಮಾರ್ಗದರ್ಶನಕ್ಕೆ ಹೊರತಾಗಿರಲಿಲ್ಲ. ಶ್ರೀಶಾರದಾ ದೇವಿಯವರ ಮೂಲಕ ಚತುರ್ಯೋಗಗಳಾದ ಭಕ್ತಿಯೋಗ, ಜ್ಞಾನಯೋಗ, ಕರ್ಮಯೋಗ, ರಾಜಯೋಗಗಳಲ್ಲದೆ "ಮಾತೃಪ್ರೇಮ ಯೋಗ"ವನ್ನೂ ಅಧ್ಯಾತ್ಮ ಸಾಧನೆಯ ನವ ನೂತನ ಮಾರ್ಗವಾಗಿ ಜಗತ್ತಿನ ಮುಂದೆ ತೆರೆದಿಟ್ಟರು. ಮಾತೃ ಭಾವವು ಸ್ತ್ರೀಸಹಜವಾಗಿದ್ದು, ಅವಿವಾಹಿತೆ-ವಿವಾಹಿತೆಯರೆನ್ನದೆ, ಪುತ್ರವತಿ-ಅಪುತ್ರವತಿಯರೆನ್ನದೆ, ಉದ್ಯೋಗಸ್ಥೆ-ಗೃಹಿಣಿಯರೆನ್ನದೆ ಸಕಲ ಸ್ತ್ರೀಯರೂ ಸುಲಭವಾಗಿ ಅಭ್ಯಾಸ ಮಾಡಿ, ತನ್ಮೂಲಕ ಅಧ್ಯಾತ್ಮ ಜೀವನದಲ್ಲಿ ಸಾರ್ಥಕತೆಯನ್ನು ಕಂಡುಕೊಳ್ಳಬಹುದಾಗಿದೆ.

ಕಾಮ-ಕಾಂಚನಗಳೇ ಜೀವನದ ಮೌಲ್ಯಗಳೆಂದೆಣಿಸಿರುವ ಇಂದಿನ ದಿನಗಳಲ್ಲಿ ಪವಿತ್ರತೆ, ವಿನಯ, ಸಹನೆ, ಸ್ಥೈರ್ಯ, ನೈತಿಕ ಸಂಯಮ, ನಿಃಸ್ವಾರ್ಥ ಪ್ರೇಮ, ತ್ಯಾಗ, ಸೇವೆಗಳ ಸಾಕಾರ ಮೂರ್ತಿಗಳಾಗಿ ಶ್ರೀಶಾರದಾ-ರಾಮಕೃಷ್ಣರು ನಮ್ಮೆಲ್ಲರ ಬದುಕನ್ನು ಬೆಳಗಿಸಿದ್ದಾರೆ. ಇಬ್ಬರೂ ತಮ್ಮ ನಿರ್ಲಿಪ್ತ ದಾಂಪತ್ಯ ಜೀವನದ ಮೂಲಕ ದಂಪತಿಗಳಿಗೆ ಸಂಯಮದ ಜೀವನವನ್ನು ನಡೆಸಲು ಪ್ರೇರಣೆ ನೀಡುತ್ತಿದ್ದಾರೆ. ಸ್ತ್ರೀಪುರುಷರು ಉತ್ತಮ ಆದರ್ಶವನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡದ್ದೇ ಆದರೆ ಜನಸಂಖ್ಯಾ ಸ್ಫೋಟವನ್ನು ಸುಲಭವಾಗಿ ಹತೋಟಿಗೆ ತರಬಹುದಲ್ಲದೆ ಶಕ್ತಿವಂತ, ಬುದ್ಧಿವಂತ, ನೀತಿವಂತ, ಸದ್ಗುಣಿಗಳಾದ ಮಕ್ಕಳನ್ನು ರೂಪಿಸುವಲ್ಲಿ ಪ್ರಯತ್ನಿಸಿದಾಗ ಕುಟುಂಬದಲ್ಲಿ ಸಂತೋಷವಿರುತ್ತದೆ, ಸಮಾಜದಲ್ಲಿ ಶಾಂತಿಯಿರುತ್ತದೆ, ರಾಷ್ಟ್ರವು ಮುನ್ನಡೆಯುತ್ತದೆ ಎಂಬುದನ್ನು ಪರೋಕ್ಷವಾಗಿ ತಿಳಿಸಿಕೊಟ್ಟಿದ್ದಾರೆ. ವಾಸ್ತವವಾಗಿ ಮಕ್ಕಳನ್ನು ಹಡೆಯದಿದ್ದರೂ ನೂರಾರು ಜನರು ವಾತ್ಸಲ್ಯ ಪೂರಿತ ಮಾತೃಹೃದಯಿಯಾದ ಶ್ರೀಶಾರದಾ ದೇವಿಯವರನ್ನು ತಮಗೆ ಜನ್ಮ ನೀಡಿದ ತಾಯಿಗಿಂತಲೂ ಮಿಗಿಲಾಗಿ ಭಾವಿಸುತ್ತ 'ಅಮ್ಮಾ' ಎಂದು ಕರೆದರು. ಬ್ರಹ್ಮಚರ್ಯ ಹಾಗು ಮಾತೃತ್ವದ ಪವಿತ್ರತೆಯನ್ನು ಒಮ್ಮೆಲೆ ಮನುಕುಲಕ್ಕೆ ತೋರಿಕೊಟ್ಟು ಹೆಣ್ತನದ ಗೌರವ-ಗರಿಮೆಗಳನ್ನು ಹೆಚ್ಚಿಸಿದ ಮಹಾಮಾತೆ ಶ್ರೀಶಾರದಾದೇವಿಯವರ ಜೀವನವೇ ಶ್ರೀರಾಮಕೃಷ್ಣರು ನಾರೀಕುಲಕ್ಕೆ ನೀಡಿರುವ ಪರಮ ಸಂದೇಶ. ಅದಲ್ಲದೆ ಶ್ರೀರಾಮಕೃಷ್ಣರು ತಮ್ಮ ಭಕ್ತರಿಗೆ ತಾವೇ ತಾಯಿಯಂತಿದ್ದುದೂ ಗಮನಾರ್ಹ.

ಶ್ರೀರಾಮಕೃಷ್ಣರೊಮ್ಮೆ ಶ್ರೀಶಾರದಾದೇವಿಯವರನ್ನು ಉದ್ದೇಶಿಸಿ "ನಾನೇ ಎಲ್ಲವನ್ನೂ ಮಾಡಬೇಕೆ? ನೀನೇನನ್ನೂ ಮಾಡುವುದಿಲ್ಲವೇ" ಎಂದಾಗ, ಶ್ರೀಶಾರದಾದೇವಿಯವರು, "ನಾನಾದರೋ ಮಹಿಳೆ, ನನ್ನಿಂದೇನು ಸಾಧ್ಯ?" ಎಂದರು. "ಇಲ್ಲ, ಇಲ್ಲ, ನೀನು ಮಾಡಬೇಕಾದುದು ಬಹಳಷ್ಟಿದೆ" ಎನ್ನುತ್ತ ಶ್ರೀರಾಮಕೃಷ್ಣರು ಸಮಾಜೋದ್ಧಾರ ಕಾರ್ಯದಲ್ಲಿ ಸ್ತ್ರೀಯರ ಜವಾಬ್ದಾರಿ ಹಾಗೂ ಸಾಮರ್ಥ್ಯಗಳನ್ನು ಎತ್ತಿ ಹಿಡಿದರು. ಅವರೇ ಒಂದು ಕಡೆ ಹೇಳಿದಂತೆ ಶ್ರೀಮಾತೆಯವರು ಜಗತ್ತಿಗೆ ಜ್ಞಾನವನ್ನು ನೀಡಲೆಂದು ಧರೆಗಿಳಿದು ಬಂದ ಸರಸ್ವತಿ. ಆಕೆಯನ್ನನುಸರಿಸಿ ನವಯುಗದ ಸ್ತ್ರೀಯರು ನಡೆದರೆಂದರೆ ಶ್ರೀರಾಮಕೃಷ್ಣರ ಕರೆಗೆ ಓಗೊಟ್ಟಂತೆಯೇ. ✪

## ಶ್ರೀರಾಮಕೃಷ್ಣರನ್ನು ಕುರಿತು ಶ್ರೀಮಾತೆ ಶಾರದಾದೇವಿಯವರು

✰ ಶ್ರೀರಾಮಕೃಷ್ಣರು ಜನರ ಕಷ್ಟಗಳನ್ನು ಪರಿಹರಿಸುವುದಕ್ಕೆಂದೇ ಮನುಷ್ಯರೂಪದಲ್ಲಿ ಅವತರಿಸಿದ ದೇವರು. ರಾಜನು ಮಾರುವೇಷದಲ್ಲಿ ನಗರಸಂಚಾರ ಮಾಡುವಂತೆ ಅವರೂ ಓಡಾಡಿಕೊಂಡಿದ್ದರು. ಜನ ಅವರನ್ನು ಗುರುತಿಸಿದ ಕೂಡಲೇ ಅವರು ಜಗತ್ತನ್ನು ಬಿಟ್ಟು ಹೊರಟುಹೋದರು.

✰ ಈ ಯುಗಕ್ಕೆ ಅವರ ವಿಶೇಷ ಸಂದೇಶವೇ ತ್ಯಾಗ ಎನ್ನುವುದು. ಶ್ರೀರಾಮಕೃಷ್ಣರಲ್ಲಿ ಕಂಡುಬರುವಷ್ಟು ಸಹಜವಾದ ತ್ಯಾಗವನ್ನು ಹಿಂದೆ ಯಾರಾದರೂ ಎಲ್ಲಾದರೂ ಕಂಡಿದ್ದರೇ?

✰ ಶ್ರೀರಾಮಕೃಷ್ಣರು ಎಷ್ಟೊಂದು ಸತ್ಯನಿಷ್ಠರಾಗಿದ್ದರು? ಅವರು ಹೇಳುತ್ತಿದ್ದರು, ಕಲಿಯುಗದಲ್ಲಿ ಸತ್ಯವನ್ನು ಹೇಳುವುದೇ ತಪಸ್ಸು ಎಂದು. ಸತ್ಯಕ್ಕೆ ಬಲವಾಗಿ ಅಂಟಿಕೊಳ್ಳುವುದರಿಂದ ಭಗವಂತನನ್ನು ಪಡೆಯಲು ಸಾಧ್ಯ.

✰ ಶ್ರೀರಾಮಕೃಷ್ಣರೇ ನಮ್ಮ ಆಧಾರ- ಅವರೇ ನಮ್ಮ ಆದರ್ಶ. ಎಂತಹ ಪರಿಸ್ಥಿತಿಯಲ್ಲೂ ಅವರನ್ನು ಬಲವಾಗಿ ಹಿಡಿದುಕೋ; ನೀನೆಂದೂ ತಪ್ಪು ಹೆಜ್ಜೆ ಇಡುವುದಿಲ್ಲ. ✪



****